ಮನಸ್ಥಿತಿಯೂ ಸಹ ಮೊದಲಿನಂತಿರಲಿಲ್ಲ. ಅವರು ಏನೋ ಕಳೆದುಕೊಂಡವರಂಗಾಗಿದ್ದರು. ಸುಮ್ಮನೇ ಸಿಡಿಮಿಡಿಗೊಳ್ಳುತ್ತಿದ್ದರು. ತಮ್ಮಷ್ಟಕ್ಕೆ ತಾವೇ ಮಾತಾಡಿಕೊಳ್ಳುತ್ತಿದ್ದರು. ಅವರ ಇರುವಿಕೆಯಲ್ಲಿ ಅದೇನೋ ಹೇಳಿಕೊಳ್ಳಲಾಗದಂಥ ಬದಲಾವಣೆಯಾಗಿತ್ತು. ಮೊದಲೆಲ್ಲ ಮಠಕ್ಕೆ ಬರುತ್ತಿದ್ದ ಭಕ್ತರನ್ನು ನಗುಮೊಗದಿಂದ ಮಾತನಾಡಿಸುತ್ತ, ಅವರೊಂದಿಗೆ ಲವಲವಿಕೆಯಿಂದ ಬೆರೆಯುತ್ತಿದ್ದವರು ಇದ್ದಕ್ಕಿದ್ದಂಗೆ ಅಂತರ್ಮುಖಿಯಾಗಿ ಬಿಟ್ಟರು! ಇದು ಮಠದ ಭಕ್ತರಿಂದ ಹಿಡಿದು ಅವರ ಆಪ್ತವಲಯದಲ್ಲಿರುವವರಿಗೆಲ್ಲ ಅಚ್ಚರಿಯನ್ನುಂಟು ಮಾಡಿತ್ತು. ಆದರೂ ಅವರು ಬಾಯಿಬಿಟ್ಟು ಕೇಳುವ ಸ್ಥಿತಿಯಲ್ಲಿರಲಿಲ್ಲ. ಇತ್ತಿತ್ತಲಾಗಿ ಅವರು ಒಬ್ಬಂಟಿಯಾಗಿರಲು ಬಯಸುತ್ತಿದ್ದರು. ಯಾವಾಗಲೂ ಮಠದೊಳಗೆ ಇದ್ದುಕೊಂಡು ಭಕ್ತರಿಗೆ ದರ್ಶನ ಭಾಗ್ಯ ದಯಪಾಲಿಸುತ್ತಿದ್ದ ಪಂಚಯ್ಯಸ್ವಾಮಿಗಳು ಯಾವಾಗ ನೋಡಿದರೂ ವಿಶ್ರಾಂತಿ ಕೋಣೆಯೊಳಗೆ ಇರುತ್ತಿದ್ದರು. ಅವರ ಮಾರಿಯ ಮೇಲಿನ ಎಂದಿನ ಕಳೆ ಇಲ್ಲವಾಗಿತ್ತು. ಏನೇನೋ ಚಿಂತೆಗಳು ಅವರ ತಲೆಯೊಳಗೆ ತುಂಬುಕೊಂಡು ಇನ್ನಿಲ್ಲದಂಗೆ ಘಾಸಿಗೊಳಿಸಿದ್ದವು. ಅದಕ್ಕೇ ಈ ಪರಿಯಾಗಿ ಕಾಡುತ್ತಿದ್ದ ಚಿಂತೆಗಳಿಂದಾಗಿ ರಾತ್ರಿ ಪೂರ್ತಿ ಒಬ್ಬರೇ ಕುಂತು ಒಳಗೊಳಗೆ ತಳಮಳಿಸುತ್ತಿದ್ದರು. ಕಡೆಗೂ ಆ ತಳಮಳದಿಂದ ಪಾರಾಗಲೆಂಬಂತೆ ಪಲ್ಲಂಗದ ಮೇಲೆ ಮಲಗಿ ಕಣ್ಣು ಮುಚ್ಚಿದರೆ ಸಾಕು ಮೈಮೇಲೆಲ್ಲ ಸಳಸಳನೆ ನಾಗರಹಾವು ಹರಿದಾಡಿದಂಗಾಗುತ್ತಿತ್ತು! ಇದಾದ ಮರುಕ್ಷಣದಲ್ಲೇ ಅದೆಲ್ಲಿಂದಲೋ ಓಡಿ ಬಂದ ಮಾಯಾ ಅದರ ಬಾಲವನ್ನು ಹಿಡಿದೆತ್ತಿ ಮೇಲೆ ಗಿರಿಗಿಟ್ಲೆಯಂತೆ ತಿರುಗಿಸಿದಂಗಾಗಲು ಬೆಚ್ಚಿಬೀಳುತ್ತಿದ್ದರು. ಆಕ್ಷಣದಲ್ಲಿ ಅವರ ಗಂಟಲು ಆರಿ ಬಂದು ಉಸಿರೇ ನಿಂತಂಗಾಗುತ್ತಿತ್ತು. ಈಗೀಗಂತೂ ಮಾಯಾ ಕನಸೊಳಗೆ ಬಂದು ಅವರನ್ನು ಕಂಡು ಕೇಕೆ ಹಾಕಿ ನಕ್ಕಂತಾಗುತ್ತಿತ್ತು. ಇದರಿಂದಾಗಿ ಸಾಕಷ್ಟು ಹೈರಾಣಾಗಿ ಹೋಗಿದ್ದ ಪಂಚಯ್ಯಸ್ವಾಮಿಗಳ ಎದೆಯಲ್ಲಿ ಇನ್ನಿಲ್ಲದ ಆತಂಕ, ಚಡಪಡಿಕೆ ಮನೆ ಮಾಡಿತ್ತು. ಅವರು ನಿದ್ದೆಯಲ್ಲಿರಲಿ ಅಥವಾ ಎಚ್ಚರವಾಗಿರಲಿ ಮಾಯಾಳ ಚಿತ್ರ ಕಣ್ಮುಂದೆ ಬಂದರೆ ಸಾಕು ಭಯದಿಂದ ನಡುಗುತ್ತಿದ್ದರು. ಅಷ್ಟರ ಮಟ್ಟಿಗೆ ಆಕೆ ಪಂಚಯ್ಯಸ್ವಾಮಿಗಳ ಬೆನ್ನು ಬಿದ್ದಿದ್ದಳು.

...ಅಷ್ಟಕ್ಕೂ ಮಾಯಾ ಬೇರಾರೂ ಆಗಿರದೇ ಗಂಗಾಧರಯ್ಯಸ್ವಾಮಿಗಳ ಕಾಲದಿಂದಲೂ ವಿರಕ್ತ ಮಠಕ್ಕೆ ನಡೆದುಕೊಳ್ಳುತ್ತಿದ್ದ ತಳವಾರ ಭೀಮವ್ವನ ಮಗಳು ಹೇಮವ್ವನ ಏಕೈಕ ಪುತ್ರಿಯಾಗಿದ್ದಳು. ಮಾಯಾ ಎರಡು ವರ್ಷದವಳಿರುವಾಗಲೇ ಗಂಡನನ್ನು ಕರೆದುಕೊಂಡು ಬಂದು ತೌರು ಮನೆಯಲ್ಲಿ ಭೀಮವ್ವನೊಂದಿಗೆ ಉಳಿದುಕೊಂಡಿದ್ದ ಹೇಮವ್ವ, ಬದುಕಿಗಾದೀತು ಎಂದುಕೊಂಡು ದಡ್ಡಿಯಲ್ಲಿ ಎಮ್ಮೆಯೊಂದನ್ನು ಕಟ್ಟಿದ್ದಳು. ಆ ಎಮ್ಮೆಯ ಹೈನು ಮಾರಿ ಬಂದ ಹಣವನ್ನು ಮಾಯಾಳ ಭವಿಷ್ಯಕ್ಕಾಗಿ ಕೂಡಿಡುತ್ತಿದ್ದಳು. ಇನ್ನು, ನಿತ್ಯದ ಬದುಕನ್ನು ನಿರ್ವಹಿಸಲು ಹೇಮವ್ವ ಮತ್ತು ಆಕೆಯ ಗಂಡ ಜೊತೆಗೂಡಿ ಬೇರೆಯವರ ಹೊಲಗಳಲ್ಲಿ ಕಸ ತೆಗೆಯುವ ಕೆಲಸಕ್ಕೆ ಹೋಗುತ್ತಿದ್ದರು. ಹೀಗೆ ಒಂದು ರೀತಿಯಲ್ಲಿ ಜನರು, 'ಅವರ ಬದುಕು ಪಾಡೈತಿ...' ಎಂದು ಮಾತನಾಡಿಕೊಳ್ಳುವಂತಿತ್ತು. ಆದರೆ, ವಿಧಿಗೆ ಅವರು ಛಲೋತಂಗಿ ಇರುವುದು ಸರಿ ಬರಲಿಲ್ಲ ಎನ್ನೋವಂಗೆ ಅದೊಂದು ದಿನ ಹೇಮವ್ವ ಮತ್ತು ಆಕೆಯ ಗಂಡ ಇಬ್ಬರೂ ಸೇರಿಕೊಂಡು ಸಂತೆ ಮಾಡಲೆಂದು ಅಥಣಿ ಪ್ಯಾಟಿಗೆ ಹೋಗಿ, ಟಂಟಂನಲ್ಲಿ ಮರಳಿ ಊರಿಗೆ ಬರುವಾಗ ರಸ್ತೆ ಅಪಘಾತದಲ್ಲಿ ತೀರಿ ಹೋಗುವುದರ ಮೂಲಕ ಮಾಯಾಳ ಸಮಸ್ತ ಜವಾಬ್ದಾರಿಯನ್ನು ಭೀಮವ್ವನ ಕೊರಳಿಗೆ ಕಟ್ಟಿಬಿಟ್ಟರು! ಆದರೆ, ಮಾಯಾಳನ್ನು ದೊಡ್ಡವಳನ್ನು ಮಾಡಿ, ಆಕೆಗೆ ನಾಕು ಅಕ್ಷರ ಕಲಿಸುವಷ್ಟರಲ್ಲಿ ಭೀಮವ್ವ ಬದುಕಿನೊಂದಿಗೆ ಅಗಾಧವಾದ ಹೋರಾಟವನ್ನೇ ಮಾಡಿದ್ದಳು. ದುಡಿದು ತಿನ್ನುತ್ತಿದ್ದ ಭೀಮವ್ವನಿಗೆ ಸುತ್ತಿಕೊಂಡಿದ್ದ ಕಷ್ಟ ಕೋಟಲೆಗಳು ಮಾಯಾಳನ್ನು ಛಲೋತಂಗಿ ಓದಿಸಬೇಕೆಂಬ ಆಶೆಯನ್ನು ಕಮರಿಸಿಬಿಟ್ಟಿತ್ತು. ಆದರೆ, ಅಮಾಯಕರ ವಿಚಾರದಲ್ಲಿ ಯಾರದೋ ಹೊಟ್ಟೆಯಲ್ಲಿ ದೇವರು ಹೊಕ್ಕುತ್ತಾನೆ ಎಂಬಂತೆ ಮಠದ ಪರಮ ಭಕ್ತೆಯಾಗಿದ್ದ ಆಕೆಯ ಈ ಸ್ಥಿತಿಯು ಪಂಚಯ್ಯಸ್ವಾಮಿಗಳ ಗಮನಕ್ಕೆ ಬರಲು ಅವರಿಗೆ ತಡೆದುಕೊಳ್ಳಲಾಗಲಿಲ್ಲ. ಆಗ ಅವರು ಮಾಯಾಳ ಬೆನ್ನಿಗೆ ನಿಂತರು. ಆಕೆ ಹೈಸ್ಕೂಲಿನಲ್ಲಿ